ದಿನಾಂಕ 02-04-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ** ಪ್ರತಿವಾದಿ 1ರ ಪರ ಶ್ರೀ ಎಸ್.ಆರ್.ಬಿ. ವಕೀಲರಿಂದ

12. ದಾವಾ ಆಸ್ತಿಗಳಲ್ಲಿ ಅಜ್ಜಣ್ಣನಿಗೆ 4 ಜನ ಮಕ್ಕಳಿದ್ದುದರಿಂದ ¼ ಭಾಗ ಪ್ರತಿಯೊಬ್ಬರಿಗೆ ಇರಬೇಕಿತ್ತ ಎಂದರೆ ಸಾಕ್ಷಿ ಮೂರೆ ಜನ ಮಕ್ಕಳೆ ಭಾಗ ಮಾಡಿಕೊಂಡು ಸ್ವಾದೀನ ಇದ್ದದ್ದು ಎಂದು ನುಡಿಯುತ್ತಾರೆ. ಸದ್ರಿ ಅಜ್ಜಣ್ಣನಿಗೆ 5 ಜನ ಗಂಡು ಮಕ್ಕಳು ಹಾಗೂ ಒಬ್ಬ ಮಗಳು ಇದ್ದರು ಎಂದರೆ ಸಾಕ್ಷಿ ನನಗೆ ಅದು ಗೊತ್ತಿಲ್ಲ, ಆದರೆ ತಂದೆ ಕಥೆ ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ಅಜ್ಜಣ್ಣನಿಗೆ ಆಸ್ತಿ ಇದಿದ್ದರೆ, ಅವರಿಗೆ 6 ಜನ ಮಕ್ಕಳು ಇದುದ್ದರಿಂದ 6 ಭಾಗವಾಗಬೇಕಿತ್ತು ಎಂದರೆ ಸಾಕ್ಷಿ 3 ಜನ ಮಕ್ಕಳು ಮಾತ್ರ ಭಾಗ ಮಾಡಿ ಅವರ ಕ್ಷೇತ್ರವನ್ನು ಸಾಗುವಳಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಅಜ್ಜಣ್ಣನಿಗೆ ಸಕಲಬೇಣೆ ಗ್ರಾಮದಲ್ಲಿ 3 ಸರ್ವೆ ನಂಬರ್ ನಲ್ಲಿ ಆಸ್ತಿಗಳು ಹಾಗೂ ಅವರ್ಸಾ ಗ್ರಾಮದಲ್ಲಿ ಸರ್ವೆ ನಂ.46/3 ಅ ಮತ್ತು 46/3 ಬ ಸ್ವತ್ತುಗಳು ಇದ್ದವು. ಅವರ್ಸಾ ಗ್ರಾಮದ ಆಸ್ತಿಗಳಲ್ಲಿ ಅನಾದಿ ಕಾಲದಿಂದಲೂ ವಾಸ್ತವ್ಯದ ಮನೆ ಮಾಡಿಕೊಂಡು ಅದರಲ್ಲಿ ಮನೆ ಕಟ್ಟಿ ಕೊಂಡು ವಾಸ್ತವ್ಯ ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಕರ್ನಾಟಕ ಭೂ ಸುಧಾರಣಾ ಕಾಯ್ದಿ ಬರುವ ಪೂರ್ವದಲ್ಲಿ ಮೃತ ಅಜ್ಜಣ್ಣ ಖೇಮು ನಾಯ್ಕ ಹಾಗೂ ತದನಂತರ ಪುರುಷೋತ್ತಮ ಹಾಗೂ ಕೃಷ್ಣ ಅಜ್ಜಣ್ಣ ರವರ ಹೆಸರು ಆ ಬಾಬ್ತು ಮುಂದುವರಿದುಕೊಂಡು ಬಂದಿತ್ತು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆ ಬಗ್ಗೆ ಅಧಿಕೃತ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಭೂ ನ್ಯಾಯಾ ಮಂಡಳಿಗೆ ಕೃಷ್ಣ ಅಜ್ಜಣ್ಣ ನಾಯ್ಕ ಅರ್ಜಿ ಸಲ್ಲಿಸಿದಂತೆ ಭೂ ನ್ಯಾಯಾ ಮಂಡಳಿ ಕುಟುಂಬದ ಪರವಾಗಿ ಅವರ ಹೆಸರಿಗೆ ಕುಟುಂಬದ ವತಿಯಿಂದ ಅದಿಬೋಗ ದಾರಿಕೆಯ ಹಕ್ಕನ್ನು ನೀಡಿದ್ದು ಇರುತ್ತದೆ ಎಂದು ಸುಳ್ಳು

ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ಆ ಸ್ವತ್ತನ್ನು ಕೃಷ್ಣ ಅಜ್ಜಣ್ಣ ನಾಯ್ಕ ರವರೆ ಸಾಗುವಳಿ ಮಾಡುತ್ತಿದ್ದು, ಅವರ ಹೆಸರಿಗೆ ವೈಯಕ್ತಿಕವಾಗಿ ಮಂಜೂರಾಗಿ ತದನಂತರ ಅವರ ಹೆಂಡತಿಯ ಹೆಸರಿಗೆ ಆಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು 1 ನೇ ಪ್ರತಿವಾದಿಯ ಕುಟುಂಬದ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಆದ್ದರಿಂದ ದಾವೆಯಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಸಕಲಬೇಣಾ ಆಸ್ತಿಗೆ ಸಂಬಂದಿಸದಂತೆ ಎಂದು ಉಲ್ಲೇಖಿಸಿರುವುದು ನಮಗೆ ಆ ಆಸ್ತಿಯಲ್ಲಿ ಹಕ್ಕಿಲ್ಲ ಎಂದು ಒಪ್ಪಿಕೊಂಡಿರುವುದಾಗಿದೆ ಎಂದರೆ ಸರಿಯಲ್ಲ.

13. ಅವರ ಹೆಸರಿಗೆ ಮಂಜೂರಾಗಿರುವುದನ್ನು ಹಾಗೂ ತದನಂತರ ಅವರ ಹೆಂಡತಿ ಜಾನಕಿರವರ ಹೆಸರಿಗೆ ಅಧಿಬೋಗದಾರಿಕೆ ಹಕ್ಕು ಪ್ರಾಪ್ತವಾಗಿರುವುದನ್ನು ಎಲ್ಲಾದರೂ ಪ್ರಶ್ನಿಸಿದ್ದೀರಾ ಎಂದರೆ ಸಾಕ್ಷಿ ನಾವು ಹಿಂದಿನಿಂದಲೂ ಒಂದೇ ಕುಟುಂಬದಲ್ಲಿ ಇದ್ದು ನಾವು ಕೋರ್ಟ್ ಕಚೇರಿಗೆ ಹೋದವರಲ್ಲ ಹಾಗೂ 5 ವರ್ಷಗಳ ಹಿಂದಿನಿಂದಲೂ 1 ನೇ ಪ್ರತಿವಾದಿ ಕೊಡುತ್ತೇನೆ ಎಂದು ಹೇಳಿಕೊಂಡು ಬಂದು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಸದ್ರಿ ಜಾನಕಿರವರ ಹೆಸರಿಗೆ ಅಧಿಬೋಗದಾರಿಕಾ ಹಕ್ಕು ಅಂದಾಜು 2000 ನೇ ಸಾಲಿನಲ್ಲಿ ಪ್ರಾಪ್ತವಾಗಿರಬಹುದು. ಅವರಿಗೆ 2000 ನೇ ಸಾಲಿನಲ್ಲಿ ಅಧಿಬೋಗದಾರಿಕಾ ಹಕ್ಕು ಪ್ರಾಪ್ತವಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಅಜಮಾಸ ಆ ಸಮಯದಲ್ಲಿ ಇರಬಹುದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು 2000 ನೇ ಸಾಲಿನ ನಂತರ ಇರಬಹುದು ಎಂದು ನುಡಿಯುತ್ತಾರೆ. ಆ ಮಾಹಿತಿ ಆ 2000 ನೇ ಸಾಲಿನಲ್ಲಿ ಇತ್ತಾ ಎಂದರೆ ಸಾಕ್ಷಿ ನಮಗೆ ಈಗ ದಾಖಲೆ ಮಾಡುವ ಸಮಯದಲ್ಲಿ ಗೊತ್ತಾಯಿತ್ತು ಎಂದು ನುಡಿಯುತ್ತಾರೆ. ಸದ್ರಿ ಕೃಷ್ಣ ಅಜ್ಜಣ್ಣ ನಾಯ್ಕರವರಿಗೆ ಸ್ವಯಾರ್ಜಿತವಾಗಿ ಆಸ್ತಿ ಮಂಜೂರಾಗಿರುವುದರಿಂದ ಹಾಗೂ ತದನಂತರ

ಮ್ಯೂಟೇಷನ್ ಅವರ ಹಾಗೂ ಅವರ ಹೆಂಡತಿಯ ಹೆಸರು ನಂತರ 1 ನೇ ಪ್ರತಿವಾದಿಯ ಹೆಸರಿಗೆ ಬಂದಿರುವುದು ನಮ್ಮ ಕುಟುಂಬದವರಿಗೆ ಗೊತ್ತಿರುವುದರಿಂದ ಅದನ್ನು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ಅವರವರ ಭಾಗದ ಆಸ್ತಿ ಅವರವರಲ್ಲಿಯೇ ಇದ್ದುದರಿಂದ ಪ್ರಶ್ನಿಸಿಲ್ಲ ಎಂದು ನುಡಿಯುತ್ತಾರೆ.

14. 1 ನೇ ಪ್ರತಿವಾದಿ ಮಾರಾಟ ಮಾಡಿರುವ 37 ಗುಂಟೆ ಜಮೀನು ಸಕಲಬೇಣಾದ ದಾವಾ ಸ್ವತ್ತು ಸರ್ವೆ ನಂ.58 ರ ಪೈಕಿಯಾಗಿರುತ್ತದೆ. ಅದನ್ನು 2018-19 ನೇ ಸಾಲಿನಲ್ಲಿ ಮಾರಾಟ ಮಾಡಿರುತ್ತಾರೆ. ಅದನ್ನು ಮಾರಾಟ ಮಾಡುವಾಗ ತಕರಾರು ಮಾಡಿದ್ದೀರಾ ಎಂದರೆ ಸಾಕ್ಷಿ ನಾವು ತಕರಾರು ಹಾಕಿಲ್ಲ ಅವರವರದ್ದನ್ನು ಅವರವರೆ ಹೊಂದಿದ್ದಾರೆ ಎಂದು ನುಡಿಯುತ್ತಾರೆ. ಆ ಮಾರಾಟ ಮಾಡಿರುವ ಆಸ್ತಿಯಲ್ಲಿ ನಮಗೆ ಹಕ್ಕು ಇಲ್ಲದೆ ಇದ್ದುದರಿಂದ ಅದನ್ನು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ಅವರ ಭಾಗದ್ದನ್ನು ಮಾರಾಟ ಮಾಡಿರುವುದು ಎಂದು ನುಡಿಯುತ್ತಾರೆ.

15. ಗೋಪು ಪುರುಷೋತ್ತಮ ಮತ್ತು ಬಾಸ್ಕರ ವಾಸುದೇವಾ ನಾಯ್ಕರವರು ನಮ್ಮ ಕುಟುಂಬದವರೆ ಎಂದರೆ ಸರಿ. ಅವರ ಪರವಾಗಿ ವಕೀಲರಾದ ಜಗದೀಶ್ ಹಾರ್ವಾಡೆಕರ್ ರವರು ದಿನಾಂಕ 21-09-2020 ರಂದು ನೋಟಿಸ್ ಕೊಟ್ಟಿರುವುದು ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಅದರಲ್ಲಿ ಪಿತ್ರಾರ್ಜಿತ ಆಸ್ತಿಗಳನ್ನು ವಿಂಗಡಿಸಿ ಕೊಡಬೇಕೆಂದು ಕೋರಿಕೊಂಡಿರುವುದು ನನಗೆ ಗೊತ್ತಾಗಿತ್ತು ಎಂದರೆ ಸಾಕ್ಷಿ ಆ ನಂತರ ತಿಳಿಯಿತು ಎಂದು ನುಡಿಯುತ್ತಾರೆ. ದಿನಾಂಕ 03-11-2020 ರಂದು ನನ್ನ ವಕೀಲರಾದ ಎಂ.ಪಿ.ಭಟ್ ರವರು 1 ನೇ ಪ್ರತಿವಾದಿಯ ಪರವಾಗಿ ಉತ್ತರ ಕೊಟ್ಟಿರುವುದು ನನಗೆ ಗೊತ್ತು ಎಂದರೆ ಸಾಕ್ಷಿ ಆಮೇಲೆ ಗೊತ್ತಾಯಿತು ಎಂದು ನುಡಿಯುತ್ತಾರೆ. ಆ ಉತ್ತರ ನೋಟಿಸಿನಲ್ಲಿ ವಾದಿಗಳಾದ ನಮಗೆ ಹಾಗೂ ಸದ್ರಿ ಗೋಪು ಪುರುಷೋತ್ತಮ ಹಾಗೂ ಬಾಸ್ಕರ ವಾಸುದೇವಾ ನಾಯ್ಕ ರವರಿಗೆ

ಆಸ್ತಿಗಳಲ್ಲಿ ಯಾವುದೇ ರೀತಿಯ ಹಕ್ಕಿಲ್ಲ ಎಂದು ನಮೂದಿಸಿದ್ದಾರೆ ಎಂದರೆ ಸಾಕ್ಷಿ ವಕೀಲರಿಗೆ 1 ನೇ ಪ್ರತಿವಾದಿ ಸರಿಯಾಗಿ ಮಾಹಿತಿ ಕೊಟ್ಟಿರಲಿಕ್ಕಿಲ್ಲ ಹಾಗೂ ಅವರು ಕೊಟ್ಟ ರೀತಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ವಕೀಲರಿಗೆ ನೋಟಿಸ್ ಕೊಡಲು ಹಾಗೂ ದಾವೆ ಮಾಡಲು ಮಾಹಿತಿ ಮತ್ತು ದಾಖಲೆಗಳನ್ನು ಪಕ್ಷಗಾರರು ಕೊಡಬೇಕಾಗುತ್ತದೆ ಎಂದರೆ ಸರಿ. ನಾವು ಕೂಡ ಮಾಹಿತಿ ಮತ್ತು ದಾಖಲಾತಿ ಕೊಟ್ಟ ಪ್ರಕಾರ ವಕೀಲರು ಪರಿಶೀಲಿಸಿ ಉತ್ತರ ಕೊಡುತ್ತಾರೆ ಹಾಗೂ ದಾವೆ ದಾಖಲಿಸುತ್ತಾರೆ ಎಂದರೆ ಸರಿ.

16. ಆ ನೋಟಿಸಿಗೆ ಆ ರೀತಿ ಉತ್ತರ ಕೊಟ್ಟ ನಂತರ ಸಕಲಬೇಣಾದ ಹಾಗೂ ಇತರ ಆಸ್ತಿಗಳಲ್ಲಿ ನಮಗೆ ಹಕ್ಕು ಇಲ್ಲ ಎಂದು ಗೊತ್ತಾಗಿ ನಮ್ಮ ಕಬ್ಜಾದಲ್ಲಿರುವ ಆಸ್ತಿಗಳನ್ನು ಖರೀದಿಸಲು ಮಾತುಕತೆ ಮಾಡಿಕೊಂಡೆವು ಎಂದರೆ ಸರಿಯಲ್ಲ. ಆ ಮಾತುಕತೆ ಪ್ರಕಾರ 1 ನೇ ಪ್ರತಿವಾದಿಗೆ ರೂ.1,60,000/- ಹಾಗೂ ಪ್ರತಿವಾದಿ 2 ರಿಂದ 5 ನೇ ರವರ ಕುಟುಂಬಕ್ಕೆ ರೂ.1 ಲಕ್ಷ ಕೊಡುವುದು ಎಂದು ಮಾಡಿಕೊಂಡಿದ್ದೆವು ಎಂದರೆ ಸರಿಯಲ್ಲ. ನನಗೆ ಮತ್ತು 3 ನೇ ವಾದಿಗೆ ತಲಾ 4 ವರೆ ಗುಂಟೆ ಜಾಗ ಕ್ರಯಕ್ಕೆ ಕೊಡುವುದು ಎಂದು ಮಾತುಕತೆಯಾಗಿತ್ತು ಎಂದರೆ ಸಾಕ್ಷಿ ಕ್ರಯಕ್ಕೆ ಅಲ್ಲ ಆದರೆ ಕುಟುಂಬದ ಆಸ್ತಿ ವಿಭಜನೆಗೆ ಮಾತುಕತೆಯಾಗಿದ್ದು ಎಂದು ನುಡಿಯುತ್ತಾರೆ. ಆ ಮಾತುಕತೆ ಪ್ರಕಾರ ನಾನು ರೂ.20 ಸಾವಿರ ಹಾಗೂ ನನ್ನ ಅಣ್ಣ ರೂ.20 ಸಾವಿರ 1 ನೇ ಪ್ರತಿವಾದಿಗೆ ಮುಂಗಡವಾಗಿ ನೀಡಿದ್ದೇವೆ ಎಂದರೆ ಸಾಕ್ಷಿ ಕರ್ನಾಟಕ ಸರ್ಕಾರ ಎಂಬ ಹೆಸರು ಬಂದಿರುವುದರಿಂದ ಎಲ್ಲ ವಾರಸ್ಸುದಾರರ ಪರವಾಗಿ ತಲಾ ರೂ.40 ಸಾವಿರ ಅದನ್ನು ತೆಗೆಯುವ ಖರ್ಚಿಗೆ ಎಂದು ಪಡೆದರು ಎಂದು ನುಡಿಯುತ್ತಾರೆ. ಅದೇ ಪ್ರಕಾರ 7 ನೇ ಪ್ರತಿವಾದಿಗೆ 9 ಗುಂಟೆ ಮತ್ತು 8 ನೇ ಪ್ರತಿವಾದಿಗೆ 4 ವರೆ ಗುಂಟೆ ಹಾಗೂ 9 ನೇ

ಪ್ರತಿವಾದಿಗೆ 4 ವರೆ ಗುಂಟೆ ಜಾಗ ಕ್ರಯಕ್ಕೆ ಕೊಡುವ ಬಗ್ಗೆ ಮಾತುಕತೆಯಾಗಿ ಅವರು ಮೂವರು ಸೇರಿ ರೂ.50 ಸಾವಿರ ಮುಂಗಡ ಹಣ ಕೊಟ್ಟರು ಎಂದರೆ ಸಾಕ್ಷಿ ಅದು ಕ್ರಯಕ್ಕೆ ಅಲ್ಲ ಕುಟುಂಬದ ವಿಭಜನೆಗೆ ಎಂದು ನುಡಿಯುತ್ತಾರೆ. ಅದೇ ಪ್ರಕಾರ 4 ನೇ ಪ್ರತಿವಾದಿಗೆ 10 ಗುಂಟೆ ಜಮೀನು ಕ್ರಯಕ್ಕೆ ಕೊಡುವ ಮಾತುಕತೆಯಾಗಿ ಕ್ರಯದ ಕರಾರು ಪತ್ರವಾಗಿದೆ ಎಂದರೆ ಸರಿಯಲ್ಲ. ಆ ಪ್ರಕಾರ ದಸ್ತು ಮಾಡಬೇಕಾದರೆ ಪೈಕಿ ಜಮೀನಿಗೆ ನಕಾಶೆ ಬೇಕಾಗುತ್ತದೆ ಎಂದು ನನಗೆ ಗೊತ್ತು ಎಂದರೆ ಸರಿ. ಕ್ರಯ ದಸ್ತು ಮಾಡಬೇಕಾದರೆ ಮುದ್ರಾಂಕ ಶುಲ್ಕ ಹಾಗೂ ನೊಂದಣಿ ಶುಲ್ಕ ಹೆಚ್ಚಾಗಿ ಪಾವತಿಸುವುದನ್ನು ತಪ್ಪಿಸಲು ದಾನಪತ್ರ ಮಾಡಲು ತಹಶೀಲ್ದಾರ್ ರವರ ಕಚೇರಿಗೆ 11 ಇ ನಕಾಶೆ ಮಾಡಿಸಲು ಕುಟುಂಬದ ಸದಸ್ಯರು ಎಂದು ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸಾಕ್ಷಿ ಸರಿ ಎಂದು ಹೇಳಿ ನಾವು ಕುಟುಂಬದ ಸದಸ್ಯರು ಎಂದು ನುಡಿಯುತ್ತಾರೆ. ಕುಟುಂಬದ ಸದಸ್ಯರಿಗೆ ಕ್ರಯಪತ್ರ ಹಾಗೂ ದಾನಪತ್ರ ಮಾಡಿಸಲು ತಗಲುವ ಮುದ್ರಾಂಕ ಶುಲ್ಕ ಹಾಗೂ ನೊಂದಣಿ ಶುಲ್ಕಕ್ಕಿಂತ ವಾಂಟಣಿ ಪತ್ರ ಮಾಡಿಸಲು ತಗಲುವ ಮುದ್ರಾಂಕ ಶುಲ್ಕ ಹಾಗೂ ನೊಂದಣಿ ಶುಲ್ಕ ಕಡಿಮೆ ಬರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

17. ದಾನಪತ್ರ ಮಾಡಿಸಿದರೆ ಕಡಿಮೆಯಾಗುತ್ತದೆ ಎಂದು ಸರ್ವೆ ಕಚೇರಿಯಲ್ಲಿ ಹೇಳಿದರು. ಅಲ್ಲಿ 3 ತಲೆ ಮಾರಿನ ಒಳಗಡೆ ಇದ್ದರೆ ವಾಂಟಣಿ ಮಾಡಬಹುದು ಹಾಗೂ ಇಲ್ಲದಿದ್ದಲ್ಲಿ ದಾನಪತ್ರದ ದಾರಿಯಲ್ಲಿ ಹೋಗಬಹುದು ಎಂದು ತಾಲೂಕು ಕಚೇರಿಯಲ್ಲಿ ತಿಳಿಸಿದ್ದರು ಎಂದು ನುಡಿಯುತ್ತಾರೆ. ನನಗೆ ಪಿತ್ರಾರ್ಜಿತ ಆಸ್ತಿ ಅಲ್ಲ ಎಂದು ಗೊತ್ತಿದ್ದು, ಕ್ರಯಪತ್ರ ಮಾಡಿಸಿದರೆ ಹೆಚ್ಚಿಗೆ ಶುಲ್ಕ ತುಂಬಾ ಬೇಕಾಗುವುದನ್ನು ತಪ್ಪಿಸಲು ದಾನಪತ್ರ ಮಾಡಿಸಲು 11 ಇ ನಕಾಶೆಗೆ ನಾನು ಹಾಗೂ ಇತರ

ಪ್ರತಿವಾದಿಗಳು ಅರ್ಜಿ ಕೊಟ್ಟಿದ್ದೇವೆ ಎಂದರೆ ಸಾಕ್ಷಿ ಕುಟುಂಬದ ಆಸ್ತಿ ಎಂದು ಮಾಡಿದ್ದೇವೆ ಹಾಗೂ ಕ್ರಯಪತ್ರ ಸುಳ್ಳು ಎಂದು ನುಡಿಯುತ್ತಾರೆ. ಸರ್ವೆ ಇಲಾಖೆಯವರು ಬಂದು ನಾವು ಅರ್ಜಿ ಸಲ್ಲಿಸಿದಂತೆ ಅಳತೆ ಮಾಡಿದರು ಎಂದರೆ ಸರಿ. ಆ ಪ್ರಕಾರ ನಮಗೆಲ್ಲರಿಗೂ ದಿನಾಂಕ 26-02-2020 ರಂದು 11 ಇ ನಕಾಶೆಯನ್ನು ನೀಡಿದರು ಎಂದರೆ ಸಾಕ್ಷಿ ಕೋರೊನಾ ಖಾಯಿಲೆ ಬಂದಿರುವುದರಿಂದ ಬೇರೆ ಬೇರೆ ಕಡೆ ಇದ್ದವರು ಬರಲು ತೊಂದರೆಯಾಗಿ 6 ತಿಂಗಳ ಅವಧಿ ಮುಗಿದು ಹೋಯಿತು ಎಂದು ನುಡಿಯುತ್ತಾರೆ. ದಿನಾಂಕ 26-02-2020 ರಂದು ಕೋರೊನಾ ಬಂದಿಲ್ಲ ಎಂದರೆ ಸಾಕ್ಷಿ 1 ನೇ ಪ್ರತಿವಾದಿ ಎಲ್ಲರೂ ಬರಲಿ ಎಂದು ಹೇಳಿ ಕೆಲವು ವಾರಸ್ಸುದಾರರು ಬರಲು ತಡವಾಗಿ ಅವಧಿ ಮುಗಿಯಿತು ಎಂದು ನುಡಿಯುತ್ತಾರೆ. ಕೋರೊನಾ ಯಾವಾಗ ಕಮ್ಮಿಯಾಯಿತು ಎಂದು ನನಗೆ ಹೇಳಲಾಗುವುದಿಲ್ಲ.

18. 6 ತಿಂಗಳ ಅವಧಿ ಮುಗಿದ ನಂತರ ನಾವು ಪುನಹಃ ಅರ್ಜಿ ಕೊಟ್ಟೆವು ಎಂದರೆ ಸರಿ. ಆ ರೀತಿ ಪುನಹಃ ಅರ್ಜಿ ಕೊಟ್ಟದ್ದು ದಾನಪತ್ರದ ಬಾಬ್ತು ನಕಾಶೆಗೆ ಅಲ್ಲ ಹಾಗೂ ಕ್ರಯಪತ್ರದ ನಕಾಶೆಗಾಗಿ ಅರ್ಜಿ ಕೊಟ್ಟಿದ್ದು ಎಂದರೆ ಸರಿಯಲ್ಲ. ಮೊದಲನೆ ಬಾರಿ ನಾವು ದಾನಪತ್ರಕ್ಕೆ ಎಂದು ಕ್ರಯಕ್ಕೆ ಕೊಡುವ ಆಸ್ತಿಯ ಬಗ್ಗೆ ನಕಾಶೆ ಮಾಡಿರುವುದರಿಂದ 1 ನೇ ಪ್ರತಿವಾದಿ ತಕರಾರು ತೆಗೆದು 6 ತಿಂಗಳ ಅವಧಿ ಮುಗಿದು ನಾವು ಕ್ರಯದಸ್ತಿಗೆ ಪುನಹಃ ಆ ಅರ್ಜಿ ಕೊಟ್ಟಿದ್ದು ಎಂದರೆ ಸರಿಯಲ್ಲ. 2 ನೇ ಬಾರಿ ಕೂಡ ನಾವು ಕ್ರಯಪತ್ರಕ್ಕೆ ಎಂದು ಅವರಲ್ಲಿ ಹೇಳಿ ದಾನಪತ್ರಕ್ಕೆ ಎಂದು ಅರ್ಜಿಯಲ್ಲಿ ಹೇಳಿರುವುದು ಅವರಿಗೆ ಗೊತ್ತಾಗಿ ತಕರಾರು ಮಾಡಿ ನಕಾಶೆಯನ್ನು ತರಿಸಲು ಅವರು ತಕರಾರು ಅರ್ಜಿ ಸಲ್ಲಿಸಿ ನಿರಾಕರಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಮಗೆ ಹಕ್ಕಿಲ್ಲದೆ ಇದ್ದುದರಿಂದ ಕ್ರಯಕ್ಕೆ

ಪಡೆದುಕೊಳ್ಳಲು ನಾವು ತಯಾರಿ ಮಾಡಿಕೊಂಡಿದ್ದೆವು ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಲು ನಮಗೆ ದಿನಾಂಕ 04-01-2023 ರಂದು ದಾವಾ ಹೇತು ಉಂಟಾಗಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಶುಲ್ಕ ಸೂಕ್ತವಾಗಿ ಪಾವತಿಸಿಲ್ಲ ಎಂದರೆ ಸರಿಯಲ್ಲ. ಆದ ಕಾರಣದಿಂದ ನಮಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕಿಲ್ಲ ಹಾಗೂ ನಾವು ಕೋರಿದ ದಾವಾ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ** ಪ್ರತಿವಾದಿ 6 ರಿಂದ 8 ರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.